ಅ) ಬಾಗಲಕೋಟೆ ತಾಲ್ಲೂಕಿನ ಅಬಕಾರಿ ಗುತ್ತಿಗೆದಾರರು ತಮ್ಮದೇ ಆದ ಬಾಡಿಗೆ ಸಿಬ್ಬಂದಿಗಳ ಮೂಲಕ ಕಳ್ಳಭಟ್ಟಿ ಸಾರಾಯಿ ಘಟಕಗಳ ಮೇಲೆ ದಾಳಿ ಮಾಡಲು, ಸಾರಾಯಿ ನಾಶಪಡಿಸಲು ಅನುಮತಿ ನೀಡಿದೆಯೇ ?

ಆ) ಹಾಗಿದ್ದಲ್ಲಿ ಗ್ರಾಮೀಣ ನಿರಪರಾಧಿ ಜನರು, ಕಳ್ಳಭಟ್ಟಿ ವ್ಯವಹಾರಿಕರೆಂದು ಪರಿಗಣಿಸಲ್ಪಟ್ಟು ಈ ಗುತ್ತಿಗೆದಾರರ ಸಿಬ್ಬಂದಿಗಳಿಂದ ದೌರ್ಜನ್ಯಕ್ಕೆ ಒಳಗಾಗಿರುವುದನ್ನು ಸರ್ಕಾರ ಗಮನಿಸಿದೆಯೇ ?

ಇ) ಅಂಥ ಘಟನೆಗಳು ಜರುಗದಂತೆ ಸರ್ಕಾರದ ನಿರ್ದೇಶನಗಳೇನು ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಬಾಗಲಕೋಟೆ ಜಿಲ್ಲೆಯ ಬಸ್ ಡಿಪೋಗಳ ಆಡಳಿತ

1641 (1877) ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ಡಿಪೋವನ್ನು ಬಿಜಾಪುರ ಡಿವಿಜನ್‌ಗೆ ಸೇರಿಸಲಾಗಿದ್ದು, ಹಾಗೂ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಡಿಪೋವನ್ನು ಬಾಗಲಕೋಟೆ ಡಿವಿಜನ್‌ಗೆ ಸೇರಿಸಲಾದ ಕಾರಣ, ಸಾರಿಗೆ ಸಮಸ್ಯೆಗಳ ಪರಿಹಾರಕ್ಕಾಗಿ ಹಾಗೂ ಆಡಳಿತಕ್ಕೂ ಕೂಡ ಅನುಕೂಲವಾಗುವ ದಿಶೆಯಿಂದ ಜಮಖಂಡಿ ಡಿಪೋವನ್ನು ಬಾಗಲಕೊಟೆ ಡಿವಿಜನ್‌ಗೆ ಅದೇ ರೀತಿ ಮುದ್ದೇಬಿಹಾಳ ಡಿಪೋವನ್ನು ಬಿಜಾಪುರ ಡಿವಿಜನ್‌ಗೆ ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ;

ಆ) ಹಾಗಿದ್ದಲ್ಲಿ, ಈ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ) ಹೌದು

ಆ) ಈ ಕುರಿತು ಇನ್ನು 3 ತಿಂಗಳೊಳಗಾಗಿ ಕ್ರಮ ಜರುಗಿಸಲಾಗುವುದು.

ಬಾಗಲಕೋಟೆ ವಿಭಾಗದಲ್ಲಿ ವರ್ಕ್‌ಶಾಪ್ ಹಾಗೂ ಟೈರ್ ಸಂಸ್ಕರಣಾ ಘಟಕ ಸ್ಥಾಪನೆ

1642 (1878) ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗಲಕೋಟೆ ವಿಭಾಗದಲ್ಲಿ ವರ್ಕ್‌ಶಾಪ್ ಹಾಗೂ ಟೈರ್ ಸಂಸ್ಕರಣಾ ಘಟಕಗಳಿಲ್ಲದ್ದರಿಂದ ಸಮರ್ಪಕ ಸೇವೆ ದೊರೆಯದೆ ಸಾರಿಗೆ ಸೇವೆಯಲ್ಲಿ ವ್ಯತ್ಯಯ ಉಂಟಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಬಾಗಲಕೋಟೆಯ ನವನಗರ ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವರ್ಕ್ ಶಾಪ್ ಮತ್ತು ವಿಭಾಗೀಯ ಕಛೇರಿ ಅಲ್ಲದೇ ಟೈರು ಸಂಸ್ಕರಣಾ ಘಟಕಗಳನ್ನು ಬೇಗನೇ

ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೆ ; ಹಾಗಿದ್ದಲ್ಲಿ ಇಲ್ಲಿಯವರೆಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ಹೌದು.

ಆ) ಹೌದು, ಕ್ರಮ ಕೈಗೊಳ್ಳಲಾಗಿದೆ. ಟೈರ್ ಸಂಸ್ಕರಣಾ ಘಟಕಗಳನ್ನೊಳಗೊಂಡಂತೆ ವಿಭಾಗೀಯ ಕಾರ್ಯಾಗಾರ ಹಾಗೂ ವಿಭಾಗೀಯ ಕಛೇರಿಗಳ ನಿರ್ಮಾಣ ಕಾರ್ಯಗಳು ಅಂತಿಮ ಹಂತದಲ್ಲಿದ್ದು, ಆಗಸ್ಟ್ 2002ರ ಅಂತ್ಯದೊಳಗೆ ಕಾಮಗಾರಿಗಳು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಲೈಸೆನ್ಸ ನೀಡುವುದು

1643 (1879) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀರ್ ಬ್ರಾಂಡಿ ಶಾಪ್‌ಗಳಿಗೆ ಮತ್ತು ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಸಿಎಲ್-2 ಮತ್ತು ಸಿಎಲ್-9 ಲೈಸೆನ್ಸ್‌ಗಳನ್ನು ಪ್ರಸಕ್ತ ವರ್ಷ ನೀಡಲಾಗುವುದೇ ?

ಆ) ಹಾಗಿದ್ದಲ್ಲಿ, ಬಾಗಲಕೋಟೆ ಜಿಲ್ಲೆಗೆ ನೀಡಲು ಉದ್ದೇಶಿಸಿರುವ ಅಂತಹ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ? ತಾಲ್ಲೂಕುವಾರು ವಿವರಗಳನ್ನು ನೀಡುವುದು.

ಇ) ಈ ಲೈಸೆನ್ಸ್‌ಗಳನ್ನು ನೀಡುವಾಗ ಸಲ್ಲಿಸಲಾದ ಅರ್ಜಿಗಳ ಜೇಷ್ಠತಾ ಪಟ್ಟಿಯನ್ವಯ ಪರಿಗಣಿಸಲಾಗುವುದೇ ?

ಈ) ಇಲ್ಲದಿದ್ದರೆ, ಅರ್ಹತೆಯ ಅಳತೆಗೋಲುಗಳೇನು ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಪ್ರತಿ ತಾಲ್ಲೂಕಿನಲ್ಲಿ ಇರಬೇಕಾದ ಸಿಎಲ್-2 (ಚಿಲ್ಲರೆ ಮದ್ಯದಂಗಡಿಗಳು) ಮತ್ತು ಸಿಎಲ್-9 (ಬಾರ್‌ಗಳು) ಸನ್ನದುಗಳ ಸಂಖ್ಯೆಯನ್ನು ನಿಗಧಿಪಡಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಸದರಿ ಕೋಟಾ ನಿಗಧಿಪಡಿಸಿದ ನಂತರ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಆ) ಇ) ಈ) ಪ್ರಶ್ನೆ (ಅ) ಗೆ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಗದಗ್ ಬಿಜಾಪುರ ಗೇಜ್ ಪರಿವರ್ತನಾ ಕಾರ್ಯದ ಪ್ರಗತಿ

1644 (1880) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ಸರಕಾರದ ರೈಲು ಖಾತೆ ಮತ್ತು ಕರ್ನಾಟಕ ಸರ್ಕಾರದ ಮಧ್ಯ ಮಾಡಿಕೊಂಡಿರುವ ಒಪ್ಪಂದದನ್ವಯ ಗದಗ-ಬಿಜಾಪೂರ ಗೇಜ್ ಪರಿವರ್ತನಾ ಕಾರ್ಯಕ್ಕಾಗಿ ಕೇಂದ್ರ ಸರಕಾರ ಶೇಕಡ 26 ರಷ್ಟು ಹಣ ರಾಜ್ಯ ಸರ್ಕಾರದಿಂದ ಶೇಕಡ 26 ರಷ್ಟು ಧನ ಅಲ್ಲದೆ ರಾಜ್ಯ ಸರ್ಕಾರದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಇಲಾಖೆಯಿಂದ ಇನ್ನುಳಿದ ಶೇಕಡ 48 ರಷ್ಟು ಧನವನ್ನು ಸಾರ್ವಜನಿಕ ವ್ಯವಸ್ಥೆಗಳಿಂದ ಸಂಗ್ರಹಿಸಿ ಕಾಮಗಾರಿಯನ್ನು ಮುಗಿಸಬೇಕೆನ್ನುವ